


International Journal of Kannada Research
www.kannadajournal.com

**ISSN: 2454–5813**
IJKR 2019; 5(1): 37-40
© 2019 IJKR
www.kannadajournal.com
Received: 15-11-2018
Accepted: 20-12-2018

**ಡಾ.ಚೆಲುವರಾಜು**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ, ಕರ್ನಾಟಕ, ಭಾರತ

**Correspondence**
**ಡಾ.ಚೆಲುವರಾಜು**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ, ಕರ್ನಾಟಕ, ಭಾರತ

# ಕೀರ್ತನ ಸಾಹಿತ್ಯ ಮತ್ತು ಕನಕದಾಸರು: ಒಂದು ಕಿರು ನೋಟ

**ಡಾ.ಚೆಲುವರಾಜು**

**DOI:** https://doi.org/10.22271/24545813.2019.v5.i1a.995

ವಚನದ ಹಾಗೆ 'ಕೀರ್ತನ' ಸಾಹಿತ್ಯವು ಕನ್ನಡದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. ಇದನ್ನು ದೇವರ ನಾಮ, ದಾಸಸಾಹಿತ್ಯ, ದಾಸವಾಙ್ಮಯ ಎಂಬಿತ್ಯಾದಿ ಹೆಸರುಗಳಿಂದ ಕರೆಯುವುದು ರೂಢಿಯಲ್ಲಿದೆ. ಕೀರ್ತನೆ ಎಂದರೆ ವರ್ಣನೆ, ಹೊಗಳುವುದು, ಭಜಿಸುವುದು ಎಂಬಿತ್ಯಾದಿ ಅರ್ಥಗಳಿವೆ. ಇವುಗಳ ಮುಖ್ಯ ಭಾವ, ಭಕ್ತಿ. ಅಂದರೆ ಭಕ್ತ ಭಗವಂತನನ್ನು ಹಾಡಿ ಹೊಗಳುವುದು ಎಂದರ್ಥ.

ಭಕ್ತನೊಬ್ಬ ತನ್ನ ಭಗವಂತನನ್ನು ಹಾಡಿ ಹೊಗಳುವ ಹಿಂದಿನ ಉದ್ದೇಶ ಪ್ರಾಪಂಚಿಕ ಸುಖಗಳ ಬಂಧನದಿಂದ ತನ್ನನ್ನು ತಾನು ಹಂತಹಂತವಾಗಿ ಬಿಡಿಸಿಕೊಳ್ಳುವ ಒಂದು ಪ್ರಯತ್ನ ಹಾಗೂ ಪಾಡು. ಭಕ್ತನ ಈ ಪಾಡು ಕ್ರಮೇಣ ಮಾಗಿ ಹಾಡಾಗುವ ಹಾದಿಯಲ್ಲಿ ಅರಳಿವೆ, ಕೀರ್ತನೆಗಳೆಂಬ ಈ ಹೂಗಳು. ಹಾಡಿಗೆ ರಾಗ–ತಾಳಗಳ ಜೊತೆಯಾಗಿ ಹೂಗಳ ಸುಗಂಧೋಪಾದಿಯಲ್ಲಿ ಹರಡಿದ ಪರಿಮಳವೇ ಕರ್ಣಾಟಕೀಯವೆಂಬ ಸಂಗೀತ ಪರಂಪರೆ. ಸಂಗೀತ ಮತ್ತು ಸಾಹಿತ್ಯದ ಪ್ರತೀಕವಾದ ಕೀರ್ತನ ಸಾಹಿತ್ಯ ಸಂಗೀತಕ್ಕಾಗಿ ಸಂಗೀತವನ್ನು ಬಳಸದೆ ಸಾಹಿತ್ಯವನ್ನು ಸರ್ವಜನ ಆದರಣೀಯವಾದ ಮಾಧ್ಯಮವನ್ನಾಗಿಸಲು ಬಳಸಿಕೊಂಡಿದ್ದು ಅದರ ವೈಶಿಷ್ಟ್ಯ.

ಹರಿದಾಸರು ಸಾಹಿತಿಗಳಲ್ಲ. ವಚನಕಾರರ ಹಾಗೆ ಲೋಕದಲ್ಲಿ ಉಳಿದೆಲ್ಲರಂತೆ ಆಸೆಯ ದಾಸರಾಗಿ ಬದುಕುತ್ತಿದ್ದವರು. ಆಘಾತವೋ ಆಕಸ್ಮಿಕವೋ ಆಗಿ ಜೀವನದಲ್ಲಿ ತಿರುವು ಪಡೆದು ಎಚ್ಚರಗೊಂಡು ಭಗವಂತನ ಸಾಕ್ಷಾತ್ಕಾರಕ್ಕಾಗಿ ಕನಸನ್ನು ತಮ್ಮ ಕಣ್ಣ ಮುಂದೆ ತುಂಬಿಕೊಂಡು 'ದಾರಿಯಾವುದಯ್ಯ' ಎಂದು ಪ್ರಶ್ನಿಸುತ್ತಾ ಹಾದಿ ಹುಡುಕುತ್ತ ಹೊರಟವರು. ದಾಸರುಗಳು ಉಳಿದ ಸಾಹಿತಿಗಳ ಹಾಗೆ ಸಾಹಿತ್ಯ ನಿರ್ಮಿತಿಯನ್ನು ವೃತ್ತಿಯನ್ನಾಗಿಯೋ, ಗುರಿಯನ್ನಾಗಿಯೋ ಇರಿಸಿಕೊಂಡವರಲ್ಲ. ಕವಿತೆ ಕಾವ್ಯದಿಂದ ಬರುವ ಕೀರ್ತಿ, ಗೌರವ, ಸಂಪತ್ತುಗಳ ಹಂಗಿನ ಗೆರೆಯಿಂದಾಚೆಗೆ ಅವರ ಸಂಚಾರ. ದಾಸರಲ್ಲಿ ಸಾಹಿತಿಯ ಮನೋಧರ್ಮವಿದೆ. ಹೀಗಾಗಿ ಅವರು ಬರೆದಿದ್ದು ಸಾಹಿತ್ಯವು ಆಗಿದೆ. ತಮಗೂ ಭಗವಂತನಿಗೂ ಇರುವ ಅನುಭಾವಿಕ ಸಂಬಂಧದಲ್ಲಿ ತಮ್ಮ ಒಳಗನ್ನು ತಾವೇ ನೋಡಿಕೊಂಡವರು. ತಮ್ಮೊಳಗಿನ ಆರೆಕೋರೆಗಳನ್ನೆಲ್ಲ ಸ್ವವಿಮರ್ಶೆಯ ಗಾಳಿಯಲ್ಲಿ ತೂರಿಕೊಂಡವರು. ಲೋಕಜೀವನದ ನೂರಾರು ಮುಖಗಳನ್ನು ಅನುಕಂಪದಿಂದಲೇ ಪರಿಶೀಲಿಸಿದರು, ವಿಶ್ಲೇಷಿಸಿದರು.

ವೈಯಕ್ತಿಕ ಚಾರಿತ್ರ್ಯ ಮತ್ತು ಸನ್ನಡತೆಗೆ ದಾಸರು ಕೊಡುವ ಕುತ್ತು ವಿಶೇಷವಾದದ್ದು. ಸಮಾಜದ ಒಟ್ಟು ಸ್ವರೂಪದ ವಿವೇಚನೆಗಿಂತ ಒಂದು ನಿರ್ದಿಷ್ಟ ಸಮಾಜದಲ್ಲಿ ವ್ಯಕ್ತಿಗಳು ಹೇಗೆ ನಡೆದುಕೊಳ್ಳುವುದು ಒಳಿತು ಎಂಬ ಬಗ್ಗೆಯೇ ಅವರ ಚಿಂತನೆ ನಡೆಯುತ್ತದೆ. ವ್ಯಕ್ತಿಯ ಸನ್ಮಾರ್ಗಕ್ಕಾಗಿ ಪರಂಪರಾನುಗತವಾಗಿ ಬಂದ ನೀತಿ ಸಂಹಿತೆಯನ್ನು ಮತ್ತೆ ಮತ್ತೆ ಅವರು ಬೋಧಿಸುತ್ತಾ ಹೋಗಿದ್ದಾರೆ. ಅವರ ಸಮಾಜ ವಿಮರ್ಶೆಯಲ್ಲಿ ನಿಷ್ಠುರತೆಗಿಂತ ಔದಾರ್ಯ ಮತ್ತು ವಿಷಾದದ ನೆಲೆ ಮುಖ್ಯವಾಗುತ್ತದೆ. ಜೊತೆಗೆ ಇಹ ಲೋಕದ ಬದುಕಿನ ಬಗ್ಗೆ ಅವರಿಗೆ ಅಪಾರ ಕಾಳಜಿ ಇದೆಯಾದರೂ ಅವರ ನೋಟ ಇರುವುದು ಪರಲೋಕ ಸಾಧನೆಯ ಬಗ್ಗೆಯೇ ಈ ಎರಡು ನೆಲೆಯಲ್ಲಿ ಬದುಕನ್ನು ಸಾರ್ಥಕಗೊಳಿಸುವುದು ಹೇಗೆ ಎಂದು ಅವರು ಯೋಚನೆ ಮಾಡುತ್ತಾರೆ. 'ಅಲ್ಲಿರುವುದು ನಮ್ಮ ಮನೆ ಇಲ್ಲಿ ಬಂದೆ ಸುಮ್ಮನೆ' ಎನ್ನುವ ದಾಸರು, 'ದಾರಿ ಯಾವುದಯ್ಯಾ ವೈಕುಂಠಕ್ಕೆ' ಎಂದು ಇಲ್ಲಿ ನಡೆಯುತ್ತಾ ಅಲ್ಲಿನ ಗುರಿಗೆ ಹಾರೈಸಿದರು. ವೈಕುಂಠಕ್ಕೆ ಸೇರಲು ಭಕ್ತಿಯೊಂದೇ ಹಿರಿದಾದ ದಾರಿ ಎಂದು ದಾಸರು ನಂಬುತ್ತಾರೆ. ಸಂಸಾರದಲ್ಲಿ ಇದ್ದು ಇಲ್ಲದಂತೆ ಇದ್ದು ಬದುಕಿನುದ್ದಕ್ಕೂ ಸನ್ನಡತೆ ಸಾಧಿಸಿ ಹರಿನಾಮ ಸಂಕೀರ್ತನೆ ಮಾಡುವ ಮೂಲಕ ಭಕ್ತಿ ಮಾರ್ಗವನ್ನು ರೂಢಿಸಬೇಕೆಂಬುದು ದಾಸರ ವಿಚಾರ. ದೈವರಾಧನೆಯ ಅತ್ಯಂತ ಸುಲಭ

ಮತ್ತು ಸಾರ್ಥಕ ಮಾರ್ಗವೆಂದರೆ ನಾಮ ಸ್ಮರಣೆಯ ಮಾರ್ಗ. 'ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎನ್ನುವುದು ಹರಿದಾಸರ ದೃಢವಾದ ನಿಲುವು. ದೈವದ ಭಕ್ತಪರಾಧೀನತೆಯ ಬಗ್ಗೆಯಂತೂ ದಾಸರಿಗೆ ದೃಢವಾದ ನಂಬಿಕೆ ಪುರಾಣಗಳಲ್ಲಿ ತನ್ನ ಬೇರೆ ಬೇರೆ ಅವತಾರಗಳಲ್ಲಿ ದೈವವು ಭಕ್ತನು ಶ್ರದ್ಧೆಯಿಂದ ಮೊರೆಯಿಟ್ಟಾಗ ಒದಿಗೆ ಬಂದು ಭಕ್ತೋದ್ಧಾರ ಮಾಡಿದ ಸಂದರ್ಭಗಳನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಾ ನಾಮ ಸಂಕೀರ್ತನೆಯ ಮಹತ್ವವನ್ನು ದಾಸರು ಹಾಡಿಹೊಗಳಿದ್ದಾರೆ.

ಮದ್ವ ಮತ ಸಂಪ್ರದಾಯ ಈ ಕೀರ್ತನ ಸಾಹಿತ್ಯಕ್ಕೆ ಮೂಲ ಪ್ರೇರಣೆ ಮದ್ವಾಚಾರ್ಯರ ದ್ವಾದಶ ಸೂತ್ರವಾಗಿದೆ. ಮದ್ವಾಚಾರ್ಯರ ಶಿಷ್ಯರಾದ ನರಹರಿ ತೀರ್ಥರು ದಾಸಕೂಟದ ಸ್ಥಾಪಕರು ಮತ್ತು ಆ ಮೂಲಕ ಕೀರ್ತನ ಸಾಹಿತ್ಯಕ್ಕೆ ನಾಂದಿ ಹಾಡಿದವರು. ಅವರ ಶಿಷ್ಯರಾದ ಶ್ರೀಪಾದರಾಯರು, ಅದಕ್ಕೊಂದು ಭದ್ರ ಬುನಾದಿಯನ್ನು ಹಾಕಿದರು. ಸ್ನಾನವಾದ ಮೇಲೆ ಕನ್ನಡವನ್ನು ಮಾತನಾಡುವುದಿರಲಿ ಕೇಳಿಸಿಕೊಂಡರೂ ಅಪವಿತ್ರ ಎನ್ನುವ ಸಂಪ್ರದಾಯವಾದಿ ವೈದಿಕರ ದೇವರ ಮನೆಗೆ ಕನ್ನಡದ ಹಾಡುಗಳು ಪ್ರವೇಶಿಸುವ ಹಾಗೆ ಮಾಡಿದ ಕೀರ್ತಿ ಶ್ರೀಪಾದರಾಜರಿಗೆ ಸಲ್ಲುತ್ತದೆ. ಇಂಥ ಶ್ರೀಪಾದರಾಜರ ಶಿಷ್ಯರಾದ ವ್ಯಾಸರಾಯರು ತಮ್ಮ ಗುರುಗಳ ಮಾರ್ಗವನ್ನೇ ಅನುಸರಿಸಿ ಕೀರ್ತನ ಸಾಹಿತ್ಯವನ್ನು ಪೋಷಿಸಿ ಬೆಳೆಯಿಸಿದವರು. ಅವರ ಪ್ರಿಯ ಶಿಷ್ಯರಾದ ಪುರಂದರ, ಕನಕರು ಅದೇ ಮಾರ್ಗದಲ್ಲಿಯೇ ಮುನ್ನಡೆದು ಉತ್ಕೃಷ್ಟತೆಯನ್ನು ಮೆರೆದವರು ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಹೆಸರಾದವರು.

ಕೀರ್ತನ ಸಾಹಿತ್ಯದಲ್ಲಿ ಪುರಂದರದಾಸರಷ್ಟೇ ಪ್ರಖ್ಯಾತರೂ, ಕವಿಗಳು, ಸಮಕಾಲೀನ ಆಪ್ತ ಸ್ನೇಹಿತರು ಆದ ಇನ್ನೊಬ್ಬ ಕೀರ್ತನಕಾರರೆಂದರೆ ಕನಕದಾಸರು. ಇವರ ಕಾಲ ಕ್ರಿ.ಶ.1550 ಹಾವೇರಿ ಜಿಲ್ಲೆಯ ಬಾಡ ಅವರು ಹುಟ್ಟಿದ ಊರು. ತಿರುಪತಿ ತಿಮ್ಮಪ್ಪನ ವರಪ್ರಸಾದದಿಂದ ಹುಟ್ಟಿದುದರಿಂದಾಗಿ 'ತಿಮ್ಮಪ್ಪ' ಎಂಬುದು ಅವರ ಹೆಸರು. ತಂದೆ ಕುರುಬ ಮತಕ್ಕೆ ಸೇರಿದ ಬಾಡ ಪ್ರಾಂತ್ಯದ ಪಾಳೆಯಗಾರನಾದ ಬೀರಪ್ಪನಾಯಕ, ತಾಯಿ ಬಚ್ಚಮ್ಮ. ಆಕಸ್ಮಿಕವಾಗಿ ದೊರೆತ ಅಪಾರ ಧನರಾಶಿಯಿಂದಾಗಿ ತಿಮ್ಮಪ್ಪನಾಯಕ ಕನಕನಾಯಕರಾದರು. ಕಾಗಿನೆಲೆಯಲ್ಲಿ ತಮ್ಮ ಆರಾಧ್ಯ ದೈವವಾದ ಆದಿಕೇಶವನ ಮತ್ತು ನರಸಿಂಹನ ದೇವಾಲಯವನ್ನು ಕಟ್ಟಿಸಿದರು. ಬದುಕಿನ ಯಾವುದೋ ಒಂದು ತಿರುವಿನಲ್ಲಿ ವೈರಾಗ್ಯ ತಾಳಿ ಎಲ್ಲವನ್ನೂ ತ್ಯಜಿಸಿ ವಿಜಯನಗರಕ್ಕೆ ಬಂದು ವ್ಯಾಸರಾಯರ ಪ್ರಿಯ ಶಿಷ್ಯರಾಗಿ ದಾಸ ಕೂಟವನ್ನು ಸೇರಿ ಕನಕದಾಸರೆನಿಸಿದರು. 'ಕಾಗಿನೆಲೆಯಾದಿಕೇಶವ' ಎಂಬುದು ಅವರ ಕೀರ್ತನೆಗಳ ಅಂಕಿತ.

ಕನಕದಾಸರು ಕೀರ್ತನಕಾರರ ಹಾಗೆಯೇ ಕವಿಗಳೂ ಹೌದು. ಅವರು ಸಾಂಗತ್ಯದಲ್ಲಿ 'ಮೋಹನ ತರಂಗಿಣಿ' ಎಂಬ ಬೃಹತ್ ಕಾವ್ಯವನ್ನು, ಭಾಮಿನಿ ಷಟ್ಪದಿಯಲ್ಲಿ ಹರಿಭಕ್ತಸಾರ, ರಾಮಧಾನ್ಯಚರಿತೆ, ನಳಚರಿತೆ ಎಂಬ ಕೃತಿಗಳನ್ನು ರಚಿಸಿದ್ದಾರೆ. 'ನೃಸಿಂಹಸ್ತವ' ಎಂಬ ಚಿಕ್ಕಸಾಂಗತ್ಯ ಕೃತಿಯು ಅವನದೇ ಆಗಿರಬೇಕೆಂಬುದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹರಿಭಕ್ತಸಾರ 110 ಷಟ್ಪದಿಗಳಿಂದ ಕೂಡಿದ ಹರಿನಾಮಸ್ತವವಾದರೆ ರಾಮಧಾನ್ಯಚರಿತೆ ರಾಗಿ(ಬಡವ) ಭತ್ತ(ಶ್ರೀಮಂತ)ಗಳ ಮಧ್ಯದ ಸಂಘರ್ಷದ ಕಲ್ಪಿತ ಕಥೆಯಾಗಿದೆ. ನಳಚರಿತೆ, ನಳದಮಯಂತಿಯರ ಸುಪ್ರಸಿದ್ಧ ಪೌರಾಣಿಕ ಕಥೆಯಾಗಿದೆ. ಮೋಹನ ತರಂಗಣಿ ಮಹಾಭಾರತ ಮತ್ತು ಭಾಗವತ ಪುರಾಣಾದಿಗಳಲ್ಲಿ ಅಡಕವಾಗಿರುವ ಕಾಮದಹನ, ಕೃಷ್ಣ–ರುಕ್ಮಿಣಿಯರ, ರತಿ–ಮನ್ಮಥರ, ಉಷಾ–ಅನಿರುದ್ಧರ ಮೋಹದ ಪ್ರೇಮ ಕಥೆಯನ್ನು ವಿಸ್ತಾರವಾಗಿ ನಿರೂಪಿಸಿದೆ. ವಿಜಯನಗರ ಕಾಲದ ವೈಭವದ ಜೀವನ ಚಿತ್ರಣ ಈ ಕೃತಿಯ ಇನ್ನೊಂದು ವೈಶಿಷ್ಟ್ಯ. ಇಲ್ಲಿನ ಕೃಷ್ಣ ಕೃಷ್ಣದೇವರಾಯನೇ ಆಗಿದ್ದಾನೆ. ಅಲ್ಲಮನು ರಚಿಸಿದ ಬೆಡಗಿನ ವಚನಗಳಂತೆ ಮುಂಡಿಗೆಗಳು 'ಕನಕನ ಮುಂಡಿಗೆ'ಗಳೆಂದೇ ಪ್ರಸಿದ್ಧಿಯಾಗಿದೆ.

ಭಾಗವತ ಮನೋಧರ್ಮದ ಕನಕದಾಸರ ಆಧ್ಯಾತ್ಮಯಾತ್ರೆ ಅತ್ಯಂತ ವಿಶಿಷ್ಟವಾದುದು ಮತ್ತು ಅಷ್ಟೇ ವಿಸ್ಮಯಕಾರಿಯಾದುದು. ದ್ವೈತ ಮತಭಾವದ ಹರಿನಾಮ ಸ್ಮರಣೆಯಿಂದ ಆರಂಭವಾದ ಅವರ ಸಾಧನೆ ಭಕ್ತಿಯ ಆರ್ದ್ರತೆ ಆತ್ಮಶೋಧನೆ, ಆತ್ಮ ಸಮರ್ಪಣೆ, ಸಾಮಾಜಿಕ ಅಗ್ನಿ ದಿವ್ಯಗಳ ಮೂಲಕ ಹಾಯ್ದು ಅದ್ವೈತ ಸಿದ್ಧಿಯ ಪರಮ ಗುರಿಯನ್ನು ತಲುಪಿದೆ. ವೈಷ್ಣವ, ಶ್ರೀವೈಷ್ಣವ, ಶೈವ, ವೀರಶೈವ ಕೊನೆಗೆ ಖುರಾನ್ ಧರ್ಮ ತೀರ್ಥಗಳಲ್ಲಿ ಮಿಂದ ಅವರ ಚೇತನ ವಿಶ್ವ ಪಥದತ್ತ ಸಾಗಿದೆ. ರಾಮಾನುಜಚಾರ್ಯ, ತಾತಾಚಾರ್ಯ, ವ್ಯಾಸರಾಯ ಮತ್ತು ವಾದಿರಾಜರ ಪ್ರಭಾವಕ್ಕೊಳಗಾಗಿಯೂ ಅವರು ಯಾರ ಮತಕ್ಕೂ ಅಂಟಿಕೊಳ್ಳದೇ ಸಕಲ ತತ್ವಗಳನ್ನು ಮೀರಿ ಬೆಳೆದು ನಿಂತ ದಿವ್ಯ ಆಧ್ಯಾತ್ಮ ಚೇತನವಾಗಿದೆ.

**ಪವಾಡಗಳು**

1. ಕನಕದಾಸರು ವ್ಯಾಸರಾಯರ ಮೆಚ್ಚಿನ ಶಿಷ್ಯರು. ಒಮ್ಮೆ ಗುರುಗಳು ಭಕ್ತಿಯ ಹಿರಿಮೆಯನ್ನು ಜನತೆಗೆ ತಿಳಿಯಪಡಿಸಲು ಒಂದು ಪರೀಕ್ಷೆಯನ್ನು ನಡೆಸಿದರು. ಎಲ್ಲ ಶಿಷ್ಯಂದಿರಿಗೆ ಒಂದೊಂದು ಬಾಳೆಹಣ್ಣು ನೀಡಿ 'ಯಾರು ಇಲ್ಲದಿರುವ ಸ್ಥಳದಲ್ಲಿ ಈ ಹಣ್ಣನ್ನು ತಿಂದು ಬನ್ನಿ' ಎಂದರು. ಮಾರನೆಯ ದಿನ ಶಿಷ್ಯರೆಲ್ಲರೂ ತಮಗೆ ಸರಿ ಕಂಡ ಸ್ಥಳದಲ್ಲಿ ತಿಂದು ಬಂದುದಾಗಿ ತಿಳಿಸಿದರು. ಕನಕದಾಸರು ಮಾತ್ರ ಆ ಭಗವಂತ ಇರದ ಸ್ಥಳವು ದೊರೆಯಲಿಲ್ಲ ಭಗವಂತ ಸರ್ವವ್ಯಾಪಿ. ಹೀಗಾಗಿ ಬಾಳೆಹಣ್ಣು ತಿನ್ನಲು ಆಗಲಿಲ್ಲ ಗುರುಗಳೇ ಎಂದು ಹೇಳಿದರು. ಅದು ಕನಕದಾಸರ ಭಕ್ತಿಯ ಪರಾಕಾಷ್ಠೆ.
2. ಕನಕದಾಸರು ಉಡುಪಿಯ ಶ್ರೀಕೃಷ್ಣನ ದರ್ಶನಕ್ಕೆಂದು ಹೋದಾಗ ಅಲ್ಲಿನ ಬ್ರಾಹ್ಮಣರು ಕುಲಹೀನನೆಂದು ಈತನನ್ನು ಮಂದಿರದ ಒಳಗೆ ಬಿಡಲಿಲ್ಲ. ಈತನನ ಭಕ್ತಿಯ ಆವೇಶಕ್ಕೆ ದಯಾ ಗುಣನಾದ ಶ್ರೀಕೃಷ್ಣನೇ ಕನಕದಾಸರಿದ್ದ ಕಡೆಗೆ ಕಿಂಡಿಯ ಮೂಲಕ ದರ್ಶನ ನೀಡಿದನು. ಇದು ಕನಕನ ಕಿಂಡಿಯೆಂದೇ ಪ್ರಸಿದ್ಧಿ ಪಡೆದಿದೆ.
3. ವ್ಯಾಸರಾಯರು ಒಮ್ಮೆ ಶಿಷ್ಯರನ್ನು ಉದ್ದೇಶಿಸಿ ನಿಮ್ಮಲ್ಲಿ ಯಾರು ಮೋಕ್ಷವನ್ನು ಪಡೆಯುವಿರಿ ? ಎಂದು ಪ್ರಶ್ನಿಸುತ್ತಾರೆ. ಆಗ ಕನಕದಾಸರು ನಾನು ಹೋದರೆ ಹೋದೇನು ಎಂದು ಹೇಳಿದರು. ಆಗ ಉಳಿದ ಶಿಷ್ಯರೆಲ್ಲರೂ ಈತನು ಅಹಂಕಾರಿ. ಮೇಲ್ಜಾತಿಯವರಿಗಿಲ್ಲದ ಮೋಕ್ಷ ಇವನಿಗೆ ಹೇಗೆ ದೊರೆಯುತ್ತದೆ ಎಂದರು. ಅದಕ್ಕೆ ಕನಕದಾಸರು 'ನಾನು' ಎಂಬ ಅಹಂಕಾರ ನಾಶವಾದರೆ ಯಾರು ಬೇಕಾದರೂ ಮೋಕ್ಷವನ್ನು ಪಡೆಯಬಹುದು ಎಂದು ವಿವರಿಸಿದರು. ಶಿಷ್ಯರೆಲ್ಲರೂ ಮೌನವಾದರು, ಗುರು ವ್ಯಾಸರಾಯರು ಕನಕದಾಸರ ಭಕ್ತಿ ಪಾರಮ್ಯತೆಗೆ ಸಂತಸಗೊಂಡರು. ಈ ಕನಕದಾಸರ ಕೀರ್ತನೆಗಳಲ್ಲಿ ಗೇಯತೆ, ಒಗಟು, ಭಾವ, ಲಯಗಳು ಸಾದ್ಯಂತವಾಗಿ ಮೇಳೈಸಿವೆ. 'ತಲ್ಲಣಿಸದಿರು ಕಂಡ್ಯ ತಾಳು ಮನವೇ', 'ತನು ನಿನ್ನದು ಜೀವ ನಿನ್ನದು', 'ಕುಲ ಕುಲವೆಂದು ಹೊಡೆದಾಡದಿರಿ', 'ತೀರ್ಥವನು ಪಿಡಿದವರೆಲ್ಲ', 'ಮುತ್ತು ಬಂದಿದೆ ಕೇರಿಗೆ', 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ಮುಂತಾದ ಕೀರ್ತನೆಗಳಲ್ಲಿ ಭಕ್ತಿ, ನಿರ್ಭರತೆ, ಸಮಾಜದ ಕುಂದು ಕೊರತೆಗಳನ್ನು ತಿದ್ದುವ ಪ್ರಾಂಜಲ ಹಂಬಲವಿದೆ.

ಅಹಂಕಾರ ಡಾಂಭಿಕತನ, ಭಕ್ತಿ ಶೂನ್ಯತೆಯಿಂದ ಕೂಡಿ ಭೋಗ ಪ್ರವೃತ್ತಿಯಲ್ಲಿ ಕಾಲ ಕಳೆಯುತ್ತಿರುವುದನ್ನು ಕಟುವಾಗಿ ವಿಡಂಬಿಸಿದರು. ಭಕ್ತಿ ನಿಷ್ಠೆಗಳಿಲ್ಲದೆ ಹೊರಗಿನ ಮುಡಿಗೆ, ಆಚಾರಗಳಿಗೆ ಪ್ರಾಧಾನ್ಯತೆ ಕೊಡುವ ಕಪಟಿಗಳನ್ನು ಟೀಕಿಸಿದರು. ತೀರ್ಥವನು ಪಿಡಿದವರೆಲ್ಲ ತಿರುನಾಮ ಧಾರಿಗಳೇ, ಜನ್ಮಸಾರ್ಥಕವಿಲ್ಲದವರೆಲ್ಲ ಭಾಗವತರೇ ಎಂದು ಡಾಂಭಿಕತೆಯನ್ನು ಹೊತ್ತು ಮೆರೆಸುವ ಮೂಢರನ್ನು ಅವರು ಖಂಡಿಸಿದರು.

ಸಮಾಜದಲ್ಲಿ ಗುಣಕ್ಕಿಂತ ಕುಲವೇ ಮುಖ್ಯವೆಂದು ಬೀಗುವವರ ಕಂಡ ಕನಕದಾಸರು ಕುಲದ ನೆಲೆಯವೇನಾದರೂ ಬಲ್ಲಿರಾ ಎಂದು ಪ್ರಶ್ನಿಸುತ್ತಲೇ ಗುಣ ಮುಖ್ಯವೇ ಹೊರತು ಕುಲವಲ್ಲ ಎಂಬ ಸಂದೇಶವನ್ನು ಸಾರಿದರು. ಈ ಲೋಕದಲ್ಲಿ ದುರ್ಜನರ ಸಂಗ ಬೇಡ, ನೈತಿಕ ನಡವಳಿಕೆಯೇ ಬದುಕಿನ ಜೀವಾಳ, ಆದ್ದರಿಂದ ಸದಾ ಸಜ್ಜನರ ಸಂಗದಲ್ಲೇ ಬಾಳಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

'ಕುಲ ಕುಲವೆಂದು ಹೊಡೆದಾಡದಿರಿ' ಎಂದು ಜಂಕಿಸಿ ಹೇಳುವ ಹಾಗಾದರು. ಇಂಥ ನಡವಳಿಕೆಗಳಿಂದ ವೈದಿಕ ಧರ್ಮದ ಸುತ್ತಿಗೆ ತಮ್ಮದು ಎಂದು ಭಾವಿಸಿದ್ದ ಬ್ರಾಹ್ಮಣರಿಗೆ ಕನಕದಾಸರು ಬಿಸಿ ತುಪ್ಪವಾದರು. ಹಿಂದೂ ಸಮಾಜದಲ್ಲಿ ಈ ಬ್ರಾಹ್ಮಣ/ಬ್ರಾಹ್ಮಣೇತರರ ಕಂದರ ದೊಡ್ಡದಾಗುತ್ತಾ ಹೋದಂತೆ ವ್ಯಾಸ ಪೀಠದ ಜೊತೆಗೆ ದಾಸಕೂಟದ ರಚನೆ ಆಗಬೇಕಾದಂತಹ ಅನಿವಾರ್ಯತೆ ಮೂಡಿತು. ಉಚ್ಚ ಕುಲದ ಮಾಧ್ವ ಬ್ರಾಹ್ಮಣರು ಶಾಸ್ತ್ರಾಧ್ಯಯನ ತರಹ ವ್ಯಾಕರಣ ಇತ್ಯಾದಿಗಳಲ್ಲಿ ಜ್ಞಾನ ಸಂಪನ್ನರಾಗಿ ಶಬ್ದ ಶಬ್ದಗಳನ್ನು ತಿಕ್ಕಿ ತೀಡಿ ನಿಷ್ಪತ್ತಿ ಹಿಡಿದು ಸಿದ್ಧಾಂತ ಪ್ರಮೇಯಗಳನ್ನು ಮಂಡಿಸುವುದೇ ಮುಂತಾದ ಪ್ರಕ್ರಿಯೆಗಳನ್ನು ವ್ಯಾಸ ಪೀಠಗಳಲ್ಲಿ ನಡೆಸುತ್ತಿದ್ದರು.

ಪುರಂದರದಾಸರು, ಕನಕದಾಸರು, ಜಗನ್ನಾಥದಾಸರು ಮೊದಲಾದವರ ಪ್ರಾತಿಪದಿಕ ಸಂಘಟನೆಯೇ ದಾಸಕೂಟ. ಇವರೂ ಮಾಧ್ವ ಮತ ಪ್ರಮೇಯಗಳನ್ನೇ ಪಸರಿಸುತ್ತಾ, ಆಚರಿಸುತ್ತಾ ಬಂದರಾದರೂ ಅವುಗಳನ್ನು ತಿಳಿಯಲು ಸಂಸ್ಕೃತ ಜ್ಞಾನದ ಅನಿವಾರ್ಯತೆಯನ್ನು ನಿರಾಕರಿಸಿ ಜಾತಿ ಮತಗಳ ಕಟ್ಟುಪಾಡಿಲ್ಲದ ಇವರು ಶಾಸ್ತ್ರಾಧ್ಯಯನದ ಅನಿವಾರ್ಯತೆ ಇಲ್ಲದೆ ತಮ್ಮ ಅನುಭಾವದಿಂದ ಹೊರಹೊಮ್ಮುವ ಭಕ್ತಿ ಭಾವನೆಗಳನ್ನು ತಮ್ಮ ತಾಯ್ನುಡಿಯಲ್ಲಿ ಹಾಡಿ ಲೋಕಪಾವನವನ್ನು ಆತ್ಮೋದ್ಧಾರವನ್ನು ಮಾಡಬೇಕೆನ್ನುವವರು ಇಂಥ ದಾಸಕೂಟವನ್ನು ಹುಟ್ಟು ಹಾಕಿ ಪೋಷಿಸಿ ಬೆಳೆಸಿದವರು. ವ್ಯಾಸರಾಯರು ಮತ್ತು ವಾದಿರಾಜರು ಇಷ್ಟಿದ್ದರೂ ದಾಸಕೂಟ ಮತ್ತು ವ್ಯಾಸ ಕೂಟಗಳ ನಡುವೆ ಆಗಿಂದಾಗ್ಗೆ ಘರ್ಷಣೆಗಳು ನಡೆದೇ ಇದ್ದವು. ಈ ಕುರಿತು ಕನಕ ಮತ್ತು ಪುರಂದರರ ಕೀರ್ತನೆಗಳೇ ನಮಗೆ ಸೂಚ್ಯವಾಗಿ ಹೇಳುತ್ತವೆ.

'ತೀರ್ಥವನ್ನು ಹಿಡಿದವರೆಲ್ಲ ತಿರುನಾಮದಾರಿಗಳೇ' ಕೀರ್ತನೆಯಲ್ಲಿ ಭಕ್ತಿಯ ವಿಡಂಬನೆ ವಚನಕಾರರ ವಚನಗಳಲ್ಲಿ ಚಿತ್ರಿತವಾದಂತೆ, ಅದರ ಮುಂದುವರಿಕೆಯಾಗಿ, ಕೀರ್ತನಕಾರರಲ್ಲಿಯೂ ತೋರಿಕೆಯ ಭಕ್ತಿ ಅರ್ಥಹೀನವೆಂಬುದನ್ನು ಲೋಕಕ್ಕೆ ಕೀರ್ತನ ಸಾಹಿತ್ಯ ಪ್ರಕಾರದ ಮೂಲಕ ತಿಳಿಸುವ ಪ್ರಯತ್ನ ಈ ದಾಸರದು. ಸಮಾಜವನ್ನು ತಿದ್ದುವ, ಅದನ್ನು ಸನ್ಮಾರ್ಗದೆಡೆಗೆ ಕರೆದೊಯ್ಯುವ ಪ್ರಯತ್ನದಲ್ಲಿ ಉಳಿದ ದಾಸರು ಜಯಶೀಲರಾದಂತೆ, ದಾಸರಲ್ಲಿ ಶ್ರೇಷ್ಠರಾದ ಕನಕದಾಸರು ಮನದಲ್ಲಿ ಭಕ್ತಿಯಿಲ್ಲದೆ, ಮೈ ಮೇಲಿಂದ ಭಕ್ತಿ ಪ್ರಕಟಿಸುವ ಈ ಡಾಂಭಿಕರು ಎಂದಿಗೂ ಪರಮಾತ್ಮನನ್ನು ಪಡೆಯಲಾಗದು ಎಂಬ ನೀತಿಬೋಧೆಯಲ್ಲಿ ಚಿತ್ರಿಸಿದ್ದಾರೆ. ತೋರಿಕೆಯ ಭಕ್ತಿ ಆಚರಿಸುತ್ತಾ ಸಮಾಜವನ್ನು ಮೆಚ್ಚಿಸಲು ಬಯಸುವ ಈ ಕಪಟದಾರಿಗಳು ದುಡಿಮೆಯ ಮೂಲಕವನ್ನಾಗಿ ಅದನ್ನೊಂದು ವೃತ್ತಿಯನ್ನಾಗಿಸಿ, ಜನರನ್ನು ನಿರಂತರವಾಗಿ ವಂಚಿಸುತ್ತಲೇ ಸಾಗುವ ಈ ವಂಚಕರ ಬಗೆಗಿನ ವಿಡಂಬನೆ ಇಲ್ಲಿದೆ. ಭಕ್ತನಾದವನು ಭಕ್ತಿಯಿಂದ ನೀರನ್ನು ಕುಡಿದರೆ ಅದು ತೀರ್ಥವಾಗಬಹುದೇ ವಿನಃ ತೋರಿಕೆಯ ಭಕ್ತಿಯನ್ನು ಪ್ರಕಟಿಸುವ ಭಕ್ತನೊಬ್ಬ ನೀಡುವ ನೀರು ಎಂದಿಗೂ ತೀರ್ಥವಾಗದು. ಮನಸ್ಸಿನಲ್ಲಿ ಮಹಾದೇವನಿದ್ದರೆ ಮಾಡುವ ಕಾರ್ಯಗಳೆಲ್ಲ ಹೇಗೆ ಪವಿತ್ರವಾಗಬಹುದೋ ಅದರಂತೆ ಭಕ್ತನೊಬ್ಬ ಭಗವಂತನ ಒಡನಾಟದಲ್ಲಿದ್ದರೆ ಆತ ನೀಡುವ ಜಲವೆಲ್ಲ ಪವಿತ್ರತೆಯಿಂದ ತೀರ್ಥವಾಗುವುದು.

ಮೂಗಿಡಿದು ನೀರೊಳಗೆ ಮುಳುಗುತ್ತಾ, ಜಪತಪಗಳನ್ನು ಪಠಿಸುತ್ತಾ, ವಿಷ್ಣು ನಾಮಸ್ಮರಣೆ ಮಾಡುತ್ತಾ ಪರಸತಿಯನ್ನು ಬಯಸಿ ಕಣ್ಣಿಡುವಂಥ ನೀಚರು ಎಂದಾದರೂ ದೇವ ಬ್ರಾಹ್ಮಣರಾಗಲು ಸಾಧ್ಯವೇ ? ಮೈಮೇಲೆಲ್ಲಾ ಪಟ್ಟೆ ನಾಮಗಳನ್ನು ಬಳಿದು ಕೈಯಲಿ ಮಧ್ಯಪಾತ್ರೆಯ ಹಿಡಿದು ಗುಟ್ಟಿನಲ್ಲಿ ಮಂತ್ರವ ಹೇಳುವ ಸಟೆ ಭಕ್ತರು ಎಂದಾದರೂ ವೈಷ್ಣವರಾಗಲು ಸಾಧ್ಯವೇ ? ಎಂದು ಪ್ರಶ್ನಿಸುತ್ತಾರೆ. ಮನಸ್ಸೇ ಮಹಾದೇವನ ಜೊತೆಯಾಗಿದ್ದು ಅಂಗಾಂಗಳೆಲ್ಲ ಆ ದೈವದಿಂದ ಪುಳಕಿತನಾದರೆ ಆತನೇ ನಿಜವಾದ ಭಕ್ತವಾಗುವನೇ ವಿನಃ ಬಾಹ್ಯ ಪರಿಕರದಿಂದ ಎಂದಿಗೂ ವ್ಯಕ್ತಿಯೊಬ್ಬ ಭಕ್ತನಾಗನು. ಜಂಗಮ ಮತ್ತು ಶಿವನ ನಡುವಿನ ವ್ಯತ್ಯಾಸವರಿಯದೇ ಇರುವ ಭಂಡರೆಲ್ಲ ಲಿಂಗವಂತರಾಗಲು ಸಾಧ್ಯವೇ ?

ಅಲ್ಲಾ ಖುದಾ ಎಂಬ ಅರ್ಥವನರಿಯದೇ ಮುಲ್ಲಾ ಶಾಸ್ತ್ರದ ನೆಲೆಯನರಿಯದೇ ಕಳ್ಳಾಟವನ್ನು ಆಡುತ್ತಾ ಆಯಾ ಧರ್ಮದವರನ್ನು ವಂಚಿಸುತ್ತಾ ಬೊಗಳೆ ಹೊಡೆಯುವ ಕಳ್ಳರಿಗೆಲ್ಲ ಎಂದಾದರೂ ವೀರಸ್ವರ್ಗ ದೊರೆಯುವುದೇ ? ಎನ್ನುತ್ತಾ ಅಂಥ ಕಳ್ಳ ಭಕ್ತರನ್ನು ಎಂದಾದರೂ ಭಕ್ತರೆನ್ನಲಾದೀತೆ? ಎನ್ನುವ ಕವಿ ಭಕ್ತನ ಭಾಷೆಯನ್ನು ಕಲಿತು, ಕಪಟ ವೇಷವನ್ನು ಧರಿಸಿ, ಆಸೆಯನ್ನು ತೊರೆಯದೇ ತಪವ ಮಾಡುವ ವೇಷಾಂತರಿಗಳೆಲ್ಲ ಸನ್ಯಾಸಿಯಾಗಲು ಸಾಧ್ಯವೇ ?

ವೈಕುಂಠಕ್ಕೆ ಸೇರಲು ಭಕ್ತಿಯೊಂದೇ ಹಿರಿದಾದ ದಾರಿ ಎಂಬುದು ಕನಕದಾಸರ ಅಭಿಮತ. ಹರಿನಾಮ ಸಂಕೀರ್ತನೆ ಮಾಡುವ ಮೂಲಕ ಭಕ್ತಿ ಮಾರ್ಗವನ್ನು ರೂಢಿಸಿಕೊಳ್ಳಬೇಕೆಂಬುದು ಇಲ್ಲಿಯ ಆಶಯವಾಗಿದ್ದು, ದೈವಾರಾಧನೆಯ ಅತ್ಯಂತ ಸುಲಭ ಮತ್ತು ಸಾರ್ಥಕ ಮಾರ್ಗವೆಂದರೆ ಹರಿನಾಮ ಸ್ಮರಣೆಯ ಮಾರ್ಗ. ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ ಎನ್ನುವುದು ಹರಿದಾಸರ ದೃಢವಾದ ನಿಲುವು ಅಂಥ ಹರಿನಾಮ ಬಲವಿದ್ದರೆ ಸಾವಿನ ಭಯ ಆತನನ್ನು ಕಾಡದು ಎಂಬ ಹೇಳಿಕೆ.

ದಾಸಕೂಟಕ್ಕೆ ಸೇರ್ಪಡೆಯಾದವರು ಸಂಸಾರ ಗೃಹಾಸ್ತಾಶ್ರಮ ತೊರೆದ ಸನ್ಯಾಸಿಗಳಲ್ಲ, ವಿರಕ್ತರೂ ಅಲ್ಲ, ಅವರೆಲ್ಲ ಹೆಂಡತಿ ಮಕ್ಕಳು ಮನೆ ಉಳ್ಳವರೇ. ಸಂಸಾರಿಯಾಗಿದ್ದೇ ಸಂಸಾರದಿಂದ ಬರುವ ಕ್ಲೇಶಗಳನ್ನು ಗೆಲ್ಲಬೇಕೆಂಬ ವ್ಯವಹಾರಿಕ ಆದರ್ಶ ಅವರದು. ಸಂಸಾರಿಯಾದವನು ಯಾವುದೇ ನೆಪದಲ್ಲಿ ಸಾಲ ಮಾಡಬಹುದು. ಈ ಸಾಲಗಾರ ಸ್ಥಿತಿಯೇ ವ್ಯಕ್ತಿಗೆ ಅಮಾನ್ಯ ಮತ್ತು ಸಮಾಜಕ್ಕೆ ಅಹಿತಕರ. ಆದ್ದರಿಂದ ಸಾಲ ಮಾಡೆನು ಎಂಬ ಪ್ರತಿಜ್ಞೆ ಅನಿವಾರ್ಯ. ಸಾಲಿಗನಿಂದ ಅವಮಾನಕ್ಕೀಡಾಗಬಾರದೆಂಬ ಸ್ವಾಭಿಮಾನ ಮತ್ತು ಆರ್ಥಿಕವಾಗಿ ಮಿತವ್ಯಯಿಯಾಗಿರಬೇಕೆಂಬ ಸಾಮಾಜಿಕ ಎಚ್ಚರ ದಾಸನಿಗವಶ್ಯಕ, 'ಸಾಲದು ಎನ್ನೆನು ಎಂಬಲ್ಲಿ' ತೃಪ್ತ ಭಾವದ ಪರಿಣಾಮವಿದೆ. ಜನತೆಗೆ ತಮ್ಮ ಹಾಡುಗಳಿಂದ ನೀತಿ ಬೋಧೆ, ರಂಜನೆ ಎರಡನ್ನು ಒಬ್ಬನೇ ಮಾಡಬಲ್ಲವರಾಗಿದ್ದ ದಾಸರು ಜನರಿಂದಲೇ ಪೋಷಿಸಲ್ಪಡುತ್ತಿದ್ದರು. ಹೀಗೆ ಸಮಾಜದಿಂದ ಪೋಷಿಸಲ್ಪಟ್ಟ ದಾಸರಿಗೆ ಸಾಮಾಜಿಕ ಋಣ ತಲೆಯ ಮೇಲಿತ್ತು.

ಈ ಋಣವನ್ನು ತೀರಿಸುವುದಕ್ಕಾಗಿ ದಾಸರು ಸಾಮಾಜಿಕ ನೀತಿ ನಿಯಮಗಳನ್ನು ಶಿಕ್ಷಕರಂತೆ ಭೋದಿಸಿದರು. ಸ್ವತಃ ತಮ್ಮ ನಡತೆಯಿಂದ ಅವರು ನೀತಿಯನ್ನು ಪಾಲಿಸಿ ತೋರಿಸಿದರು. ಅತಿ ಆಸೆಯ ತ್ಯಾಗ, ಅಸಂಗ್ರಹ ಪ್ರವೃತ್ತಿ, ಭ್ರಮ ನಿರಸನ ದೇಹದ ಮತ್ತು ಮನಸ್ಸಿನ ಆರೋಗ್ಯಕ್ಕಾಗಿ ದುರ್ವ್ಯಸನ ರಹಿತತೆ, ಆಸ್ತಿ–ಒಡವೆಗಳಿಂದ ದೂರ, ದುಡಿದು ತಿನ್ನುವ ಫಲ ಇವು ದಾಸರ ನಿತ್ಯ ನಡತೆಗಳು.

**ಪರಾಮರ್ಶನ ಗ್ರಂಥಗಳು**


1. ದಾಸ ಸಾಹಿತ್ಯ – ಕವಿ ಕಾವ್ಯ ಪರಂಪರೆ : ಸಂ. ಡಾ.ವಿ.ಸೀತಾರಾಮಯ್ಯ, ಪ್ರೊ.ಜಿ.ವೆಂಕಟಸುಬ್ಬಯ್ಯ. ಐ.ಬಿ.ಎಚ್. ಪ್ರಕಾಶನ ಬೆಂಗಳೂರು, 1987.
2. ದಾಸ ಸಾಹಿತ್ಯ ವಾರಿಧಿ : ವಾಣಿ ಅನಿಲ್. ಲೇಖಕರೇ ಪ್ರಕಾಶಕರು, ಚೆನ್ನೈ, 2010.
3. ಕನಕ ಸಾಹಿತ್ಯ ದರ್ಶನ ಸಂಪುಟ–4, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು : ಸುಧಾಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ : 2012.
4. ದಾಸ ಸಾಹಿತ್ಯ ಸೌರಭ : ಶ್ರೀನಿವಾಸ ಸು. ಮಠದ, ಗೀತಾ ಪ್ರಕಾಶನ, ವಿಜಾಪುರ